(ದಿನಾಂಕ 21-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

<u>ಪಾಟೀ ಸವಾಲುಃ  ಪ್ರತಿವಾದಿ ಪರ ಶ್ರೀ ಎ.ಕೆ ವಕೀಲರಿಂದಃ-</u>

ದಾವಾ ಆಸ್ತಿ ಸರಕಾರದವರು ಕೊಟ್ಟಂತಹ ಆಸ್ತಿ ಎಂದರೆ ಸರಿ. ಅದನ್ನು ಸರಕಾರದವರು ಶೇಕರಪ್ಪ ಅವರಿಗೆ ಕೊಟ್ಟಿದ್ದು ಇರುತ್ತದೆ. ಸದರಿ ಶೇಕರಪ್ಪ ಇವರಿಗೆ ಸರಕಾರದವರು ಆಸ್ತಿ ಮಂಜೂರು ಮಾಡಿದ ಬಗ್ಗೆ ಪಟ್ಟಾವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಶೇಕರಪ್ಪ ಇವರಿಗೆ ರಾಮಪ್ಪ, ಚಂದ್ರಪ್ಪ ಮತ್ತು ಪಕೀರಪ್ಪ ಅನ್ನುವ ಸಹೋದರರು. ಅವರ ತಂದೆಯ ಹೆಸರು ಭಾಗಲಪ್ಪ. ಸದರಿ ಆಸ್ತಿಯನ್ನು ಸರಕಾರದವರು ನಮ್ಮ ಅಜ್ಜ ಭಾಗಲಪ್ಪ ಇವರಿಗೆ ಮಂಜೂರು ಮಾಡಿತ್ತು ಎಂದರೆ ಸರಿಯಲ್ಲ. ಸರಕಾರದವರು ವಾಸದ ಮನೆಯ ಪಟ್ಟಾಗಳು ಮತ್ತು ಹಿತ್ತಲುಗಳ ಕುರಿತು ಪಟ್ಟಾಗಳನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಮಗೆ ವಾಸದ ಕುರಿತು ಪಟ್ಟಾ ಮಂಜೂರು ಮಾಡಿರುತ್ತಾರೆ ಎನ್ನುತ್ತಾರೆ. ನಮ್ಮ ತಂದೆ ಮತ್ತು ಅವರ ಸಹೋದರರ ನಡುವೆ ಕುಟುಂಬದಲ್ಲಿ ಪಾಲು ವಿಭಾಗ ಆಗಿಲ್ಲ. ನನ್ನ ತಂದೆ ಮತ್ತು ಅವರ ಸಹೋದರರು ಒಟ್ಟಿಗೆ ವಾಸವಾಗಿದ್ದರು ಎಂದರೆ ಸರಿ ಸಾಕ್ಷಿಯು ಮುಂದುವರೆದು ಈಗ ಅವರು ಬೇರೆ ಬೇರೆ ಇರುತ್ತಾರೆ ಎಂದಿರುತ್ತಾರೆ.  ಅವರು ಬೇರೆ ಬೇರೆ ಅಗಿ ಸುಮಾರು **50** ವರ್ಷಕ್ಕಿಂತ ಮೇಲ್ಪಟ್ಟು ಆಗಿದೆ. ನನ್ನ ತಂದೆ ಮತ್ತು ಅವರ ಸಹೋದರರು ಕೂಡ್ಲಿಗಿ ತಾಲೂಕು ಬೋರನಹಳ್ಳಿ ಗ್ರಾಮಕ್ಕೆ ಹೋಗಿ ನೆಲೆಸಿದರು ಎಂದರೆ ಸರಿ. ಅವರು ಸುಮಾರು **50** ವರ್ಷದ ಹಿಂದೆ ಅಲ್ಲಿ ಹೋಗಿ ವಾಸವಾಗಿರುತ್ತಾರೆ. ನಾನು ಜನಿಸಿದ **3** ತಿಂಗಳಿಗೆ ಉಲುವತ್ತಿಯನ್ನು ಬಿಟ್ಟು ಬೋರನಹಳ್ಳಿಗೆ ಹೋಗಿ ವಾಸವಾಗಿರುತ್ತೇನೆ. ನಾನು ಅಲ್ಲಿಂದ ಇಲ್ಲಿಯವರೆಗೂ ಬೋರನ ಹಳ್ಳಿ ಗ್ರಾಮದಲ್ಲಿಯೇ ವಾಸವಾಗಿರುತ್ತೇನೆ. ನನಗೆ ಈಗ **49** ವರ್ಷ ವಯಸ್ಸು. ನಾನು ಎಂದೂ ಉಲುವತ್ತಿ ಗ್ರಾಮದಲ್ಲಿ ವಾಸವಾಗಿರುವುದಿಲ್ಲ ಎಂದರೆ ಸರಿ.  ದಾವಾ ಆಸ್ತಿಯನ್ನು ಹೊರತುಪಡಿಸಿ ನಮ್ಮಕುಟುಂಬಕ್ಕೆ ಬೇರೆ ಆಸ್ತಿಗಳು ಉಲುವತ್ತಿಯಲ್ಲ ಇರುತ್ತವೆ. ಅವುಗಳ ಸರ್ವೆ ನಂ. ನನಗೆ ಗೊತ್ತಿಲ್ಲ. ಸದರಿ ಜಮೀನುಗಳು ಆಲೂರು ಚನ್ನಬಸಪ್ಪ ಇವರ ಹೆಸರಿನಲ್ಲಿರುತ್ತವೆ. ಆಲೂರು ಚನ್ನಬಸಪ್ಪ ನಮಗೆ ಸಂಬಂಧಿಕರು ಅಲ್ಲ. ನನ್ನ ತಂದೆ ಮತ್ತು ದೊಡ್ಡಪ್ಪ ಸೇರಿ ದಾವಾ ಆಸ್ತಿಯನ್ನು ದಿನಾಂಕ **23.10.1985** ರಂದು **1** ನೇ

ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ವಿಸ್ತೀರ್ಣ ಪೂರ್ವ ಪಶ್ಚಿಮ **83** ಫೂಟ್ ಉತ್ತರ ದಕ್ಷಿಣ **53** ಫೂಟ್ ಇದೆ. ಸದರಿ ಆಸ್ತಿಯ ಚೆಕ್ ಬಂದಿ ಪೂರ್ವಕ್ಕೆ ರಸ್ತೆ ಪಶ್ಚಿಮಕ್ಕೆ ಮೂಲಿಮನಿ ನಿಂಗಜ್ಜ ಇವರ ಆಸ್ತಿ ಉತ್ತರಕ್ಕೆ ರಸ್ತೆ ದಕ್ಷಿಣಕ್ಕೆ ಪಕೀರಪ್ಪನ ನಿವೇಶನ ಇದೆ. ದಾವಾ ಆಸ್ತಿಯು ನಮ್ಮ ತಂದೆಯವರ ಹೆಸರಿನಲ್ಲಿ ದಾಖಲಿದ್ದ ಬಗೆ ಪಂಚಾಯಿತಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಗಳು ಎಂದರೆ ರಸೀದಿ, ಮತ್ತು ನಮ್ಮ ತಂದೆಯವರು ಮಾಡಿದ ನೋಂದಣಿ ಪತ್ರ ಹಾಜರುಪಡಿಸಿದ್ದೇನೆ. ನಮ್ಮ ತಂದೆಗೆ ನಾವು ಇಬ್ಬರು ಗಂಡು ಮಕ್ಕಳು ಒಬ್ಬ ಹೆಣ್ಣು ಮಗಳು. ನನ್ನ ಮತ್ತು ನನ್ನ ಸಹೋದರ ಸಹೋದರಿಯರ ನಡುವೆ ಪಾಲು ವಿಭಾಗ ಆಗಿಲ್ಲ. ದಾನ ಪತ್ರಕ್ಕೆ ನನ್ನ ಅಣ್ಣ ಅಂಜನಪ್ಪ ತಾಯಿ ಕೆಂಚಮ್ಮ ಸಹಿ ಮಾಡಿರುತ್ತಾರೆ. ದಾವಾ ಆಸ್ತಿ ನಮ್ಮ ಸ್ವಾದೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿರುತ್ತಾರೆ. ಅವರು ಅದರಲ್ಲಿ ದನದ ಕೊಟ್ಟಿಗೆಯನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ದೊಡ್ಡಪ್ಪ ಇವರು ಪ್ರತಿವಾದಿ ನಂ **2** ರವರ ಹೆಸರಿಗೆ ದಿನಾಂಕ **23.10.1985** ರಂದು ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮ್ಮ ಮನೆ ಇತ್ತು ನಾವು ಊರು ಬಿಟ್ಟು ಹೋದ ಮೇಲೆ ಅದು ಬಿದ್ದು ಹೋಗಿರುತ್ತದೆ. ಆ ಮನೆಗೆ ನಂಬರ ಏನಾದರೂ ಇತ್ತ ಎಂದರೆ ಸಾಕ್ಷಿಯು ಅದಕ್ಕೆ ಡೋರ್ ನಂ. **114** ಇತ್ತು ಎನ್ನುತ್ತಾರೆ. ಆ ಮನೆ ನಮ್ಮ ತಂದೆಯವರು ಕಟ್ಟಿದ್ದು. ಅದರ ಉದ್ದ ಅಗಲ ನನಗೆ ಗೊತ್ತಿಲ್ಲ. ಅದು ಮಾಳಿಗೆ ಮನೆಯಾಗಿತ್ತು. ಸದರಿ ವಿಚಾರವನ್ನು ನಾನು ನನ್ನ ವಾದ ಪತ್ರದಲ್ಲಿ ಬರೆಸಿದ್ದೇನೆ. ಆ ರೀತಿ ಯಾವುದೇ ಮನೆ ಇರುವುದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ನಮ್ಮ ಆಸ್ತಿಯಲ್ಲಿ ಹೋದರೆ ನಮಗೆ ಹೊಡೆಯುತ್ತೇವೆ ಬಡಿಯುತ್ತೇವ ಅಂತಾ ಪ್ರತಿವಾದಿಯರು ಹೇಳಿದ್ದರಿಂದ ದಾವೆ ದಾಖಲಿಸಿದ್ದೇವೆ. ಅವರು ನನಗೆ ಆ ರೀತಿ **2023** ರಲ್ಲಿ ಹೇಳಿರುತ್ತಾರೆ ದಿನಾಂಕ ನನಗೆ ನೆನಪಿರುವುದಿಲ್ಲ. ನಾನು ಆ ಬಗ್ಗೆ ದೂರು ನೀಡಿದ್ದೇನೆ. ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ,ಅಧಿಕಾರ ಸ್ವಾದೀನ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಅಸ್ತಿಯನ್ನು ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ **2** ನೇ ಪ್ರತಿವಾದಿಗೆ ಮಾರಾಟ ಮಾಡಿರುವ ವಿಚಾರ ಗೊತ್ತಿದ್ದರೂ ಸಹ ನಾನು ನನ್ನ

ಹೆಸರಿಗೆ ದಾವಾ ಆಸ್ತಿಯನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ಸ್ವಾದೀನದಲ್ಲಿ ಇದೆ ಎನ್ನುವ ಬಗ್ಗೆ ಪಂಚಾಯಿತಿಯವರು ನೀಡಿರುವಂತಹ ಆಸ್ಸಿ ನಂ **114** ರ ದಾಖಲೆ ಹಾಜರುಪಾಡಿಸಿದ್ದೇನೆ. **1** ನೇ ಪ್ರತಿವಾದಿಗೆ ಎಷ್ಟು ವಯಸ್ಸು ಇದೆ ನನಗೆ ಗೊತ್ತಿಲ್ಲ. **2** ನೇ ಪ್ರತಿವಾದಿಗೆ **28** ರಿಂದ **30** ವಯಸ್ಸು ಇರಬಹುದು. ದಾವೆ ದಾಖಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ದಾವಾ ದಾಖಲಿಸುವ ಸಮಯದಲ್ಲಿ ಪ್ರತಿ ವಾದಿಯರ ಹೆಸರು ವಿಳಾಸ ವಯಸ್ಸು ಮತ್ತು ಉದ್ಯೋಗದ ಮಾಹಿತಿಯನ್ನು ನಾನು ನೀಡಿರುವುದಿಲ್ಲ. ನನ್ನ ಸಾಕ್ಷ್ಯ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ನೀಡಿದ್ದೇನೆ. ದಿನಾಂಕ **10.11.2022** ರಂದು ಪ್ರತಿವಾದಿಯರು ನನ್ನ ಸ್ವಾಧೀನಕ್ಕೆ ಅಡ್ಡಿ ಪಡಿಸಿದರು ಅಂತಾ ನನ್ನ ಸಾಕ್ಷ್ಯ ಪತ್ರದಲ್ಲಿ ಬರೆಸಿರುತ್ತೇನೆ. ಅದರಲ್ಲಿ ನನ್ನ ಹೆಂಡತಿಗೂ ಸಹ ಪ್ರತಿವಾದಿಯರು ತೊಂದರೆ ಕೊಟ್ಟರು ಅಂತಾ ನಾನು ಹೇಳಿ ಬರೆಸಿಲ್ಲ ಅಲ್ಲಿ ನನ್ನ ಹೆಂಡತಿ ಬಂದಿರುವುದಿಲ್ಲ. ಹಗರಿಬೊಮ್ಮನಹಳ್ಳಿ ಪೋಲೀಸ್ ಠಾಣೆಯಲ್ಲಿ ನಾನು ಮತ್ತು ನನ್ನ ಹೆಂಡತಿ ಸೇರಿ ದೂರು ನೀಡಿರುತ್ತೇವೆ ಅಂತಾ ಸದರಿ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆಸಿರುವುದಿಲ್ಲ. ದಾವಾ ಆಸ್ತಿಯಲ್ಲ ನಾನು ಸ್ವಾದೀನದಲ್ಲಿ ಇಲ್ಲ ಪ್ರತಿವಾದಿಯರು ಸ್ವಾದೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಮಾಲಿಕತ್ವವನ್ನು ನಿರ್ಧರಿಸುವ ಯಾವುದೇ ದಾಖಲೆಗಳು ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಪ್ರಮಾಣಪತ್ರ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ